ಸಿ.ಸಿ ನಂಃ 534/2022

ಡಿ ಡಬ್ಲುಃ 03.

ಸಾಕ್ಷಿಯನ್ನು ದಿನಾಂಕಃ **13.03.2026.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್., ಪಿರ್ಯಾದಿ ಪರ ವಕೀಲರಿಂದಃ**

ನಮ್ಮ ಸಂಸ್ಥೆಯಲ್ಲಿ ನಾವು ಲೆಟರಹೆಡ್ ನ್ನು ಬಳಸುತ್ತೇವೆ ಎಂದರೆ ಸರಿ. ನಿಡಿ.8 ಲೆಟರಹೆಡ್ ನಲ್ಲಿ ಇಲ್ಲ ಎಂದರೆ, ಸಾಕ್ಷಿಯು ಸೀಲ್ ಇದೆ ಎಂದು ನುಡಿಯುತ್ತಾರೆ. ನಿಡಿ. 8 ನ್ನು ಲೆಟರಹೆಡ್ ನಲ್ಲಿ ಮಾಡಲು ಏನಾದರೂ ತೊಂದರೆ ಇತ್ತೆ ಎಂದರೆ ಇಲ್ಲ. ಪಂಚನಾಮೆಯಲ್ಲಿ ಚೆಕ್ ಗಳ ಸ್ಥಿತಿಗತಿ ಬಗ್ಗೆ ನಮೂದಿಸಿದ್ದು ಇರುವುದಿಲ್ಲ. ಆರೋಪಿ ಹಾಜರುಪಡಿಸಿದ ನಿಡಿ.5 ರ 3 ನೇ ಪುಟದಲ್ಲಿ ದಿನಾಂಕಃ 30.06.2022 ರಂದು ಮೃತರ ಆಫೀಸಿನ ಡ್ರಾವರಗೆ ಸಂಬಂಧಿಸಿದಂತೆ ಸೊಸೈಟಿಯವರು ಪಂಚನಾಮೆ ಮಾಡಿ, ಅದರಲ್ಲಿದ್ದ ಕಾಗದ ಪತ್ರಗಳನ್ನು ಮತ್ತು ಎರಡು ಚೆಕ್ ಗಳನ್ನು ಮೃತರ ಹೆಂಡತಿಗೆ ಕೊಟ್ಟಿರುತ್ತಾರೆ ಎಂದು ಆರೋಪಿ ಸೊಸೈಟಿಗೆ ಹೋಗಿ ತಿಳಿದು ಬಂದಿತು ಎಂದು ನಮೂದು ಮಾಡಿದ್ದು, ಸದರಿ ವಿಷಯವನ್ನು ಆರೋಪಿ ಸೊಸೈಟಿಯಲ್ಲಿ ವಿಚಾರಿಸಿ ಬರೆದಿರಬಹುದಾ ಎಂದರೆ, ನನ್ನನ್ನು ವಿಚಾರಿಸಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಸದರಿ ಚೆಕ್ ಗಳು ಮೃತರಿಗೆ ಸಂಬಂಧಪಟ್ಟಿದ್ದಾ ಅಥವಾ ಅವರ ಮಕ್ಕಳಿಗೆ ಸಂಬಂಧಪಟ್ಟಿದ್ದಾ ಎಂದು ನಾನು ಪರಿಶೀಲಿಸಿರುವುದಿಲ್ಲ. ಎರಡು ಎಸ್.ಬಿ.ಐ ಬ್ಯಾಂಕಿನ ಸಹಿ ಮಾಡಿದ ಚೆಕ್ ಗಳು ಇದ್ದವು. ಅವುಗಳನ್ನು ಮೃತರ ವಾರಿಸುದಾರರಿಗೆ ಕೊಟ್ಟಿರುತ್ತೇವೆ. ನಾನು ಮತ್ತು ಮೃತ ಶಂಭಲಿಂಗಯ್ಯ ಬಾಳಿಗಟ್ಟಿಮಠರವರು ಸದರಿ ಸಂಸ್ಥೆಯಲ್ಲಿ ಸುಮಾರು 25 ವರ್ಷಗಳಿಂದ ಕೆಲಸ ಮಾಡುತ್ತಿದ್ದೆವು. ನಾನು ಬರುವ ಪೂರ್ವದಲ್ಲೇ ಮೃತ ಶಂಭುಲಿಂಗಯ್ಯರವರು ಕೆಲಸಕ್ಕೆ ಇದ್ದರು ಎಂದರೆ ಸರಿ. ನನ್ನ ಮತ್ತು ಮೃತರ ನಡುವೆ ಲೆಕ್ಕಪತ್ರಕ್ಕೆ ಸಂಬಂಧಿಸಿದಂತೆ ವೈಮನಸ್ಸು ಇತ್ತು ಎಂದರೆ ಇಲ್ಲ. ಈ ಬಗ್ಗೆ ನಾನು ಆಡಳಿತ ಸಮೀತಿ ಮುಂದೆ ಪ್ರಸ್ತಾಪ ಮಾಡಿದ್ದೆ, ಅದೇ ರೀತಿ ಮೃತ ಶಂಭಲಿಂಗಯ್ಯ ಬಾಳಿಗಟ್ಟಿಮಠರವರೂ ಸಹ ಸಮೀತಿ ಮುಂದೆ ಪ್ರಸ್ತಾಪಿಸಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ತಿಳಿದಿದ್ದರೂ ಸಹಿತ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ, ಯಾವುದೇ ವೈಮನಸ್ಸು ಇರಲಿಲ್ಲ ಎಂದು ನುಡಿಯುತ್ತಾರೆ. ಇದರಿಂದಾಗಿ ಸದರಿ ಶಂಭುಲಿಂಗಯ್ಯರವರು ತುಂಬಾ ಮಾನಸಿಕವಾಗಿ ಒಳಗಾಗಿದ್ದರೂ ಎಂದರೆ ನನಗೆ ಗೊತ್ತಿಲ್ಲ. ಇದರಿಂದಾಗಿ ಆಡವಿತ ಸಮೀತಿಯವರು ಅವರನ್ನು ಮುಖ್ಯ ಕಾರ್ಯನಿರ್ವಾಹಕ ಕೆಳಗಿಳಿಸಲು ಪ್ರಯತ್ನಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಕಾರಣದಿಂದಾಗಿ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಿಡಿ.8 ನ್ನು ಹಾಜರುಪಡಿಸಿ, ಈ ರೀತಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಿ ಅದು ಅವರ ಮತ್ತು ಆರೋಪಿಯ ಭಾವಚಿತ್ರವಾಗಿರುತ್ತದೆ ಎಂದರೆ ಹೌದು, ನಮ್ಮ ಮನೆಯ ಕಾರ್ಯಕ್ರಮದಲ್ಲಿ ಸದರಿ ಛಾಯಾ ಚಿತ್ರವನ್ನು ತೆಗೆಯಲಾಗಿತ್ತು ಎಂದು ನುಡಿಯುತ್ತಾರೆ. ಈ ದಿನ ನಾನು ಮತ್ತು ಆರೋಪಿ ಒಟ್ಟಿಗೆ ನ್ಯಾಯಾಲಯಕ್ಕೆ ಬಂದಿದ್ದು, ಒಟ್ಟಿಗೆ ಕುಳಿತುಕೊಂಡಿದ್ದೇವು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಪ್ರ ದ ನ್ಯಾದಂ ಮುಂಡಗೋಡ.**